**ಸಾಕ್ಷಿಯನ್ನು ದಿನಾಂಕ 02-12-2025 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ಹೆಚ್ ವಕೀಲರಿಂದಃ**

**1.** ಗುರುಸಿದ್ದಮ್ಮ ನನ್ನ ಅಜ್ಜಿ ಹಾಗೂ ಶಿವಮ್ಮ ನನ್ನ ತಾಯಿ ಎಂದು ತೋರಿಸುವ ಸಲುವಾಗಿ ತಹಸೀಲ್ದಾರ್ ರವರು ನೀಡಿರುವ ವಂಶ ವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ನನ್ನ ಮತ್ತು ನನ್ನ ತಾಯಿ ಶಿವಮ್ಮ ಗುರುಸಿದ್ದಮ್ಮರವರ ವಾರಸುದಾರರಲ್ಲ ಎಂದರೆ ಸರಿಯಲ್ಲ. ದಿಃ **25.04.1963** ರ ಮೂಲ ಕ್ರಯ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಗುರು ಸಿದ್ದಮ್ಮರವರಿಗೆ ನಂಜುಂಡಯ್ಯರವರು ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ನಂಜುಂಡಯ್ಯರವರ ತಂದೆ ಹೆಸರು ಶಿವಲಿಂಗಯ್ಯ. ನಿಪಿ-**8** ರ ಪ್ರಕಾರ **1971** ರಿಂದ **1974** ನೇ ಸಾಲಿನವರೆಗೂ ದಾವಾ ಆಸ್ತಿಯ ಖಾತೆಯು ಶಿವಲಿಂಗಯ್ಯರವರ ಹೆಸರಿನಲ್ಲಿ ಇದೆ ಎಂದರೆ ನಂಜುಂಡಯ್ಯ ಬಿನ್ ಶಿವಲಿಂಗಯ್ಯರವರ ಹೆಸರಿನಲ್ಲಿ ಇರುತ್ತದೆ.

**2.** ಶಿವಲಿಂಗಯ್ಯರವರಿಗೆ ಕರಿಬಸಯ್ಯ ಮತ್ತು ನಂಜುಂಡಯ್ಯ ಎಂಬ ಇಬ್ಬರು ಮಕ್ಕಳು. ಶಿವಲಿಂಗಯ್ಯರವರಿಗೆ ಗುರುಸಿದ್ದಪ್ಪ ಎಂಬ ಮತ್ತೊಬ್ಬ ಮಗ ಇದ್ದ ಎಂದರೆ ನನಗೆ ಗೊತ್ತಿಲ್ಲ. ನಂಜುಂಡಪ್ಪರವರಿಗೆ ನಿಪಿ-**1** ನ್ನು ಬರೆದುಕೊಡುವ ಕಾನೂನಾತ್ಮಕ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-**1** ನ್ನು ನಂಜುಂಡಯ್ಯರವರು ಗುರುಸಿದ್ದಮ್ಮನಿಗೆ ಬರೆದುಕೊಟ್ಟ ದಾಖಲೆ ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾನ ಪತ್ರದ ಆಧಾರದ ಮೇಲೆ ದಾವಾ ಆಸ್ತಿಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಹಾಗಾಗಿ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು**,** ಅಧಿಕಾರ**,** ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

OS 4/2017
PW-1

ಸಿ.ಜೆ. ಮತ್ತು ಪ್ರ.ದ.ನ್ಯಾದಂ.
ಕೊರಟಗೆರೆ

**OS 4/2017**
**PW-1**

Plaintiff present, filed his affidavit in lieu of chief examination and examined as PW-1 got marked Ex.P. 1 to 6.

Sri. TKM prays time.

Further chief of PW 1 by: 28-01-2026

Civil Judge and JMFC.
*Koratagere.*